'ಈಗಾಗಲೇ ಆಕೆ ಕಂಗಾಲಾಗಿಬಿಟ್ಟಿದ್ದಾಳೆ. ಅಲ್ಲದೇ ತನ್ನ ದಂಧೆ ಎನ್ನುವಂತಹದ್ದನ್ನು ಕೂಡ ಬಿಟ್ಟು, ಊಟ, ಉಡಿಗೆ, ತಿಂಡಿ ನಿದ್ದೆ ಎಲ್ಲ ತೊರೆದು, ಈ ಪರಿಯ ಪೇಚಿಗೆ ಒಳಗಾಗಿಬಿಟ್ಟಿದ್ದಾಳೆ. ಇದ್ದಂಥ ಒಬ್ಬಳು ಮಗಳೂ ಕೂಡ ಹತ್ತಿರ ಇಲ್ಲದ ಈ ಹೊತ್ತಿಗೆ ಈ ರೀತಿಯ ಸಂಕಟ ಅವಳ ಮೇಲೆ ಬಂದುಬಿಟ್ಟಿದೆ ಸ್ವಾಮೀ, ಆದ್ದರಿಂದ ಇಂಥ ಭೂತ, ಪಿಶಾಚಿ– ಸತ್ತವನದೇ ಆಗಲೀ, ಜೀವ ಇದ್ದಂಥವರದೇ ಆಗಲಿ, ಕಾಡುವ ಯಾವದೇ ತಾಪತ್ರಯ ಇನ್ನು ಮುಂದೆ ಅವಳನ್ನು ಕಾಡದಿದ್ದ ಹಾಗೆ, ಆಚೆ ಕಡೆಯ ದೆವ್ವ, ಈಚೆ ಕಡೆಯ ದೆವ್ವ ನೀರಾಚೆಗೇ ಇರಲಿ, ಅಥವಾ ಈಚೆಗೇ ಇರಲಿ ಅವಳಿಗೆ ಬಂದು ತಾಪತ್ರಯ ಕೊಡದಿರುವ ಹಾಗೆ–ಇನ್ನು ಮುಂದೆ, ಎಂದೆಂದೂ– ಒಂದು ಬಿಳಿದು ಕೊಡು ಸ್ವಾಮಿ, ಮಹಾರಾಯ ಒಡೆಯಾ.'

ಈ ಬಾರಿ ಬಿಳಿ ಪುಡಿ ಬಂತೆಂದು ಗುನಗ ನೋಡದೇ ಹೇಳಿಬಿಟ್ಟ. ಪ್ರಶ್ನೆ ಕೇಳುವದರಲ್ಲಿ ಅಪ್ಪನಿಗಿಂತ ಈ ಗುನಗನೇ ಭಾರೀ ಹುಷಾರಿ ಎಂದು ಸೀತಕ್ಕ ಮನಸ್ಸಿನಲ್ಲಿ ಅಂದುಕೊಂಡು ಸ್ವಲ್ಪ ಸಮಾಧಾನ ತಂದುಕೊಂಡು ಸೆರಗಿನಲ್ಲಿಯ ಚಿಲ್ಲರೆ ಹಣ ತೆಗೆದು ಲೆಕ್ಕ ಸರಿಯಾಗಿ ಮಾಡುವ ಮೊದಲೇ ಅದನ್ನೆಲ್ಲ ಗುನಗನಿಗೆ ದಕ್ಷಿಣೆಯೆಂದು ಕೊಟ್ಟು ಆಶೀರ್ವಾದ ಪಡೆದಳು. ಹೋಗುವ ಮೊದಲು ದೇವರಿಗೊಮ್ಮೆ ಅಡ್ಡಬಿದ್ದು ಹಣೆತಿಕ್ಕಿ ನಮಸ್ಕಾರ ಮಾಡಿದಳು. ಮನೆ ಮುಟ್ಟಿದಾಗ ಎಂಟು ತಾಸು ಹೊತ್ತು ಬಂದಿದೆಯೆಂದು ಪೋಸ್ಟ್‌ಮನ್‌ನನ್ನು ದೂರದಲ್ಲಿ ನೋಡಿದ ಆಕೆ ಅಂದುಕೊಂಡಳು. ತೆಂಗಿನ ಮರದ ಕೆಳಗೆ ಕಲ್ಲಿನ ಮೇಲೆ ನಿಂತು ಕಾಲಿಗೆ ನೀರು ಹೊಯ್ದುಕೊಳ್ಳುತ್ತಿದ್ದಾಗ ಪೋಸ್ಟ್‌ಮನ್ ಅವಳ ಮನೆಗೇ ಬಂದ. ಅವಳ ಹೆಸರಿಗೆ ಒಂದು ಪತ್ರ ಬಂದಿತ್ತು. ಎಂದಿನಂತೆ ಅದನ್ನು ದೊಡ್ಡಕ್ಕೆ ಓದಿಕೊಟ್ಟು ಹೋದ.

ಬಂದದ್ದು ಅವಳ ಮಗಳ ಪತ್ರ. ಅವಳ ಮಗಳಿಗೆ ಈಗ ಸಂಪಖಂಡದಿಂದ ಅಕಸ್ಮಾತ್ ಬದಲಿಯಾಗಿ ಹೊನ್ನಾವರದ ಯಾವುದೋ ಒಂದು ಹಳ್ಳಿಗೆ ಹಾಕಿದ್ದಾರಂತೆ. ಕಾರಣ ಸದ್ಯ ಸಿಗುವ ರಜೆಯನ್ನು ಸಾಹೇಬರು ರದ್ದುಮಾಡಿ ಹೊನ್ನಾವರದ ಆ ಹಳ್ಳಿಗೆ ಹೋಗುವದು ಜರೂರಿ ಇದೆಯೆಂದು ತಿಳಿಸಿದ್ದಾರಂತೆ. ಹೀಗಾಗಿ ದೀಪಾಳಿಯ ರಜೆಯ ತನಕ ಊರಿಗೆ ಬರುವುದು ಆಗಲಿಕ್ಕಿಲ್ಲ. ಏನು ಮಾಡುವದು, ಎಲ್ಲ ದೇವರ ಆಟ ಎಂದು ಅವಳು ಬರೆದು ತಿಳಿಸಿದ್ದಾಳೆ. ಆದರೆ ದೀಪಾವಳಿಯ ರಜೆಯಲ್ಲಿ ಮುದ್ದಾಂ ಮುದ್ದಾಂ ಬರುತ್ತೇನೆಂದು ಬರೆದಿದ್ದಾಳೆ. ಸೀತಕ್ಕನಿಗೆ ಸ್ವಲ್ಪ ನಿರಾಶೆಯಾಯಿತು. ಅದರೊಂದಿಗೆ ಥಟ್ಟನೇ ಮಾಳಪ್ಪ ಶ್ಯಾನುಭೋಗನೂ ಹೊನ್ನಾವರದ ಯಾವದೋ ಒಂದು ಹಳ್ಳಿಯಲ್ಲಿ ಇರುತ್ತಿದ್ದ ಎಂಬ ಒಂದು ನೆನಪು ಬಂದುಹೋಯಿತು. ಅಲ್ಲಿ ಈ ಭೂತ ಮಾಳಪ್ಪ ಕಾಡದಿದ್ದರೆ ಸಾಕು ಎಂದನಿಸಿತು. ಆದರೂ ಈ ನೌಕರಸ್ತರಿಗೆ ಹಾಗೆ ವರ್ಗಾವರ್ಗಿ ಇದ್ದೇ ಇದೆ. ಸುಮ್ಮನೇ ಇದ್ದಲ್ಲೇ ಇಡಬಾರದೇ ಇವರು ಎಂದು ಹೇಳಿಕೊಂಡಳು.

★★★

ಈಗ ಕೆಲವು ದಿನಗಳಿಂದ ರನ್ನರ್ ರಾಯಪ್ಪ ರಜೆಯ ಮೇಲೆ ಇದ್ದುದರಿಂದ ಅವನ ಮಗ ಗೋಕರ್ಣದಿಂದ ಸ್ಯಾಕಲ್ಲಿನ ಮೇಲೆ ಬಂದು ಟಪಾಲು ಚೀಲ ಕೊಟ್ಟು ಹೋಗುತ್ತಿದ್ದ. ಹೀಗಾಗಿ ಬರುವ ಟಪಾಲು ಸರಿಯಾಗಿ ಬರುವಂತಾಗಿದೆ. ಈಗ ಮಂದಿ ಕೂಡ ಮೊದಲಿನಂತೆ ಅಲ್ಲಿ ಟಪಾಲು ಕಟ್ಟೆಯ ಹತ್ತಿರ ನೆರೆಯುವುದಿಲ್ಲ. ರಾಯಪ್ಪ ಬಾರದಿರುವದರಿಂದ ಬರುವ ಸುದ್ದಿಗೂ ರಜೆ ಕೊಟ್ಟಂತಾಗಿದೆ. ಈಗ ಏನಾದರೂ ಸುದ್ದಿ ಬಂದರೆ ಅದು ಕಟ್ಟಿಕೊಟ್ಟ ಚೀಲದಲ್ಲಿಯ ಕಾಗದಗಳ ಮೇಲೆ ಬರೆದು ಬಂದವೇ ಆಗಬೇಕು. ಜೀವಂತ ಸುದ್ದಿ ಬರುವದಿಲ್ಲವಲ್ಲ. ಹೀಗಾಗಿ ಮಂದಿಗೂ ಅಷ್ಟು ತವಕ ಇಲ್ಲ.

★★★